## ವೈದ್ಯ ನಾರಾಯಣನೂ ರೋಗಿಯೇ?

ಏಪ್ರಿಲ್ 18ರ ಸಂಚಿಕೆಯಲ್ಲಿ ಡಾ. ಕೆ. ಬಿ. ರಂಗಸ್ವಾಮಿ ಅವರ ಲೇಖನ ಸಮಯೋಚಿತ. ಅಭಿನಂದನೆ. 'ವೈದ್ಯರ ವ್ಯಾಧಿಗೆ' ಹಲವಾರು ಕಾರಣಗಳಿವೆ. ವೃತ್ತಿಯ ಒತ್ತಡ, ನಕಾರಾತ್ಮಕ ಭಾವನೆಗಳು. ಹೆಚ್ಚು ಹಣ–ಆಸ್ತಿ ಸಂಪಾದಿಸುವ ಗೀಳು ಮತ್ತು ಸ್ಪರ್ಧೆ. ಅನಾರೋಗ್ಯಕರ ಜೀವನ ಶೈಲಿ ಚಟಗಳು. ಸಮಯಕ್ಕೆ ಸರಿಯಾಗಿ ಊಟ–ನಿದ್ರೆ ಇಲ್ಲದಿರುವುದು. ಕುಟುಂಬದ ನಿರ್ಲಕ್ಷ್ಯ. ತಮಗಿರುವ ರೋಗಗಳ ಬಗ್ಗೆ ನಿರ್ಲಕ್ಷ್ಯ / ಉಡಾಫೆ. ಮೈಮನ ವಿರಮಿಸುವ ಒಳ್ಳೆಯ ಹವ್ಯಾಸಗಳ ಕೊರತೆ. ರೋಗಿಗಳಿಗೆ ಸಮಾಜಕ್ಕೆ ತಾವು ಹೇಳುವ ಆರೋಗ್ಯವರ್ಧನೆಯ ಕ್ರಮಗಳನ್ನು ವೈದ್ಯರೂ ಪಾಲಿಸಿದರೆ, ವೈದ್ಯರ ವ್ಯಾಧಿ ತಗ್ಗುತ್ತದೆ. ಆರೋಗ್ಯವಂತ ವೈದ್ಯರೂ ಯಾವುದೇ ಸಮಾಜದ ಆಧಾರ ಸ್ಥಂಭಗಳು

—ಡಾ. ಸಿ ಆರ್ ಚಂದ್ರಶೇಖರ್, ಬೆಂಗಳೂರು

## 'ಹಕ್ಕಿಮನೆ, ಹಕ್ಕಿ ಮನಸ್ಸು, ಕಾವ್ಯ ಇತ್ಯಾದಿ...'



ಏಪ್ರಿಲ್ 18ರ ಸಂಚಿಕೆಯಲ್ಲಿ ಪ್ರಕಟವಾದ, ವಿಜಯಶ್ರೀ ಹಾಲಾಡಿಯವರ ಪ್ರಬಂಧ ನಮ್ಮನ್ನು ಬಾಲ್ಯಕ್ಕೆ ಕರೆದೊಯ್ಯಿತು. ವರ್ಷಪೂರ್ತಿ ಬಿರುಬೇಸಿಗೆಯಂತೆ ಭಾಸವಾಗುವ ಯಾಂತ್ರಿಕ ಬದುಕಿನಲ್ಲೊಂದು ತಂಪಾದ ಶುದ್ಧ ಗಾಳಿಯಂತಿತ್ತು. ಬರಹಗಾರ್ತಿ ವಾಸಿಸಲು ಆಯ್ದೆ ಮಾಡಿಕೊಂಡ ಬಾಡಿಗೆ ಮನೆಗಳು ಆಕೆಯ ಸಹಜ ಬದುಕಿನ ಕುರಿತಾದ ಪ್ರೀತಿ, ಕಾಳಜಿಗೆ ಪ್ರತೀಕವಾಗಿವೆ. ಬದುಕು, ನಿಸರ್ಗ ಮತ್ತು ಕಾವ್ಯಗಳನ್ನು ಪರಸ್ಪರ ಬೇರ್ಪಡಿಸಲಾಗದ ಆಕೆಯ ಭಾವ ತೀವ್ರತೆ ಆಪ್ತವೆನಿಸಿತು.

—ವೀಣಾ ಜೋಶಿ, ಬಾರ್ಕೂರು

## ಶಾಸ್ತ್ರಿಯವರನ್ನು ನೆನೆಯುತ್ತಾ...

ಏಪ್ರಿಲ್ 18ರ ಸಂಚಿಕೆಯಲ್ಲಿ, ಸವಿ ಸವಿ ನೆನಪು... ಪುಟದಲ್ಲಿ ಜಿ.ರಾಜನ್ ಅವರ ಶೈಕ್ಷಣಿಕ ಪ್ರವಾಸದಲ್ಲಿ ಆಗಿನ ಪ್ರಧಾನಮಂತ್ರಿ ಶಾಸ್ತ್ರಿಯವರನ್ನು ದೆಹಲಿಯಲ್ಲಿ ಭೇಟಿಮಾಡಿದ ನೆನಪನ್ನು ಹಂಚಿಕೊಂಡಿದ್ದಾರೆ. ಅದು ಅವರಿಗೆ ಸವಿ ನೆನಪಾದರೆ, ಸರಳ ಸಜ್ಜನ ಮೌಲ್ಯಾಧಾರಿ ರಾಜಕಾರಣಿ ಶಾಸ್ತ್ರಿ ಅವರು ನಮಗೆಲ್ಲ ಸುಗಂಧಿತ ಕಂಪು! ಪಾಕಿಸ್ತಾನದ ಜೊತೆ ದೊಡ್ಡ ಯುದ್ಧಮಾಡಿ ಗೆದ್ದು ಶಾಂತಿ ಸಂಧಾನದಲ್ಲೂ ಗೆದ್ದಿದ್ದರು! ಈಗಿನ ಅಧಿಕಾರದ ದುರಾಸೆಯ 'ಗೆದ್ದಲ ಗೂಡನ್ನೇ ಪರ್ವತವೆಂದು' ತೋರಿಸುವ ಪ್ರವೃತ್ತಿ ನಾಚಿಕೆಗೇಡಿನ ಆವೃತ್ತಿ!

—ಎಸ್. ಆರ್.ದೇವಪ್ರಕಾಶ್, ತುಮಕೂರು

## ಸಮೃದ್ಧ ಸಾಹಿತ್ಯದ ಯುಗಾದಿ ವಿಶೇಷಾಂಕ




ಬಹುಮಾನಿತ ಪ್ರಬಂಧ, ಕಥೆ, ಕವನಗಳಲ್ಲಿ ಸಾಹಿತ್ಯದ ಹೊಸರುಚಿಯನ್ನು ಹೊತ್ತು ತಂದಿರುವ, 'ಸುಧಾ' ಯುಗಾದಿ ವಿಶೇಷಾಂಕ ಓದುಗರ ಮನಸೂರೆಗೊಂಡಿದೆ. ಆಧ್ಯಾತ್ಮಿಕ, ವೈಚಾರಿಕ, ಸಿನಿಮಾ, ಕಿರುತೆರೆ, ರುಚಿಕರ ತಿನಿಸುಗಳ ಪರಿಚಯ, ಕಲಬುರ್ಗಿಯ ಚಿತ್ರ ಸಂಪುಟ ಹೀಗೆ ಒಂದೇ, ಎರಡೇ... ಎಲ್ಲ ವಯೋಮಾನದವರ ಆಶೋತ್ತರಗಳಿಗೆ ಸ್ಪಂದಿಸಿದ ಸಂಚಿಕೆ ವಿಶೇಷವನ್ನು ಸಾಧಿಸಿದೆ.

ಕತೆಗಳಿಗೆ ಚಿತ್ರ ಕಲಾವಿದರು ಬರೆದಿರುವ ವಿಮರ್ಶಾತ್ಮಕ ಟಿಪ್ಪಣಿಗಳು ವಿನೂತನವಾಗಿವೆ. ಮಂಜು ನಾಯಕರವರ 'ಫೂ' ಕತೆ ಉತ್ತರ ಕರ್ನಾಟಕದ ಗ್ರಾಮೀಣ ಶೈಲಿಯ ಸೊಗಡಿನಿಂದ ನಳನಳಿಸಿದೆ. ಅದನ್ನೋದುತ್ತಿದ್ದಂತೆ ನನಗೆ ಎಂ.ಟಿ. ವಾಸುದೇವನ್ ನಾಯರ್ ಅವರ, 'ಕುಟ್ಯಕ್ಕ' ಕಣ್ಮುಂದೆ ಕಾಣಿಸಿದಳು.

—ಮೋಹನ ರು. ಹಣಗಿ, ಅಮೀನಗಡ

## ಭೀಮಬಲ



ಏಪ್ರಿಲ್ 18ರ ಸಂಚಿಕೆಯಲ್ಲಿ ಅಂಬೇಡ್ಕರ್ ಜಯಂತಿ ಹಿನ್ನೆಲೆಯಲ್ಲಿ ಪ್ರಕಟಗೊಂಡ ಲೇಖನ ನಿಜ ಅರ್ಥದಲ್ಲಿ ಬಾಬಾರಿಗೆ ಸಂದ ಗೌರವವಾಗಿದೆ. ದೇಶಕ್ಕೆ ಕಾನೂನಾತ್ಮಕವಾಗಿ ಪ್ರತಿ ಪ್ರಜೆಗೂ ರಕ್ಷಣೆಯ ಕವಚವಾಗಿರವ ಸಂವಿಧಾನ, ಅವರ ದೂರದೃಷ್ಟಿಯ ಸಾಧನೆಯಾಗಿದೆ. ದಮನಿತರ ನೋವಿನ ಧ್ವನಿಯಾಗಿದ್ದು, ಆಶಾಕಿರಣವಾಗಿ ಹೊರ ಹೊಮ್ಮಿದ್ದು, ಬದುಕಿನಲ್ಲಿ ಎದುರಾದ ಸಂಕಷ್ಟಗಳನ್ನು ಎದುರಿಸಿ ಎದೆ ಉಬ್ಬಿಸಿ ನಿಂತ ಪರಿ ಸೋಜಿಗನ್ನುಂಟು ಮಾಡುತ್ತದೆ. ಜಗತ್ತಿನ ಅತ್ಯುತ್ತಮ ಸಂವಿಧಾನ ನಮ್ಮದೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ.'ಸಮಸಮ ಸಮಾಜ' 'ಸಾಮಾಜಿಕ ನ್ಯಾಯ'ದ ಪರಿಕಲ್ಪನೆ ನೀಡುವಲ್ಲಿ ಅವರ ಪಾತ್ರ ದೊಡ್ಡದು. ಗಾಂಧಿಯಂತೆ ಅಂಬೇಡ್ಕರ್ ಸಹ ದಂತಕಥೆಯಾಗಿ ಭಾರತೀಯರ ಮನದಲ್ಲಿ ಹಸಿರಾಗಿ ಉಳಿದಿರುವರು.

—ಎಚ್. ಎಸ್. ಕಿರಣ್ ಕುಮಾರ್, ಗೌರಿಬಿದನೂರು

## '...ಹಿಂಜರಿಕೆ ಗೆಲ್ಲಿ'



ಏಪ್ರಿಲ್ 25ರ ಸಂಚಿಕೆಯಲ್ಲಿ ಯುಪಿಎಸ್ಸಿ ಪರೀಕ್ಷೆಯಲ್ಲಿ ರಾಹುಲ್ ಸಂಕನೂರ್ ಸಂದರ್ಶನ (ಪ್ರಮೋದ್ ಜಿ.ಕೆ.) ಇಷ್ಟವಾಯ್ತು. 17ನೆಯ ರ್‍ಯಾಂಕ್ ಗಳಿಸಿ ನಮ್ಮ ರಾಜ್ಯದ ಗರಿಮೆಯನ್ನು ಮೂಡಿಸಿರುವ, ಹುಬ್ಬಳ್ಳಿಯ ರಾಹುಲ್ ಅವರ ಸತತ ಪ್ರಯತ್ನ ಮೆಚ್ಚುವಂಥದ್ದು. ಅವರ ಪ್ರತಿ ಪ್ರಯತ್ನದಲ್ಲೂ ಅನುಸರಿಸಿದ ಹಾಗೂ ಕಂಡುಕೊಂಡ ಹೊಸ ಹೊಸ ಅಧ್ಯಯನಶೀಲ ಆವಿಷ್ಕಾರಗಳು ಮುಂದೆ ಆ ಪರೀಕ್ಷೆಗಳನ್ನುಎದುರಿಸಲು ಸನ್ನದ್ಧರಾದ ಪರೀಕ್ಷಾರ್ಥಿಗಳಿಗೆ ಬಹು ಪ್ರಯೋಜನಕಾರಿಯಾಗಬಹುದು.

—ಎಸ್.ಪ್ರಭಾ, ಬೆಂಗಳೂರು

## 'ಸೂರ್ಯನಿಗೆ ಛತ್ರಿ'



ಏಪ್ರಿಲ್ 18ರ ಸಂಚಿಕೆಯ ಮುಖಪುಟ ಲೇಖನ ರಾಜ್ಯದ ವಿವಿಧ ಪ್ರವಾಸಿ ಜಲತಾಣಗಳ ಕುರಿತ ಕುತೂಹಲಭರಿತ ಮಾಹಿತಿ ನೀಡಿ ಆಸಕ್ತ ಪ್ರವಾಸಿಗರಿಗೆ ಒಂದು ಕೈಪಿಡಿಯಾಗಿದೆ. ಹಾಗೂ 'ಮನುಷತ್ವ ಇನ್ನೂ ಬದುಕಿದೆ' ಲೇಖನದಲ್ಲಿ ಮುಗ್ಧ ಬಾಲಕನ ಪರಿಶುದ್ಧ ಪ್ರೀತಿಯ ಕಂಡು ಕಣ್ಣಾಲಿಗಳು ಮಂಜಾಗುತ್ತವೆ. 'ಇದ್ದಂಗ ಇರೂದಿಲ್ಲ ಏಜುಕ್ರೇಜು' ಎಂಬ ಲಹರಿ ಮುದ ನೀಡಿತು.

—ಪ.ಚಂದ್ರಕುಮಾರ ಗೌನಹಳ್ಳಿ, ಕೆ.ವಿ. ರಾಜಲಕ್ಷ್ಮಿ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in